ಕಥೆ

# ಶಿವರಂಜಿನಿ



**ಪ್ರಸಾದ್ ಶೆಣೈ ಆರ್.ಕೆ.**

ಕಲೆ: ವೆಂಕಟ್ರಮಣ ಭಟ್

‘ಇಲ್ಲ ಇವತ್ತು ಹೇಗಾದ್ರೂ ಹೇಳೇ ಹೇಳ್ತೇನೆ, ನನ್ನನ್ನು ನನ್ನೊಳಗೆ ಮುಚ್ಚಿಕೊಳ್ಳೋಕೆ ನಂಗಿಷ್ಟ ಇಲ್ಲ, ನನ್ನೊಳಗೆ ಮೂಡಿದ್ದನ್ನು, ನನ್ನೊಳಗೆ ಕಾಡಿದ್ದನ್ನು ಹೇಳದೇ ಇರ್ಲಿಕ್ಕೆ ಹೇಗೆ ಸಾಧ್ಯ? ಅವರೇ ಎಷ್ಟು ಸರ್ತಿ ಹೇಳಿಲ್ಲ, ನೀವು ನಿಮ್ಮೊಳಗಿನ ಭಾವನೆ ವ್ಯಕ್ತಪಡಿಸದೇ ಇದ್ರೆ ನೀವು ಮನುಷ್ಯರೇ ಅಲ್ಲ, ಅದು ಎಂತದ್ದೇ ಭಾವನೆ ಇರ್ಲಿ ನೀವದನ್ನು ಹೇಳಬೇಕಾದವರಿಗೆ ಹೇಳಿಬಿಡ್ಬೇಕು ಎಂದವರು ಕ್ಲಾಸ್‌ನಲ್ಲಿ ರಾಶಿ ಸಲ ಹೇಳಿದ್ರು, ಈಗ ನಾನು ನಂಗನ್ನಿಸಿದ್ದನ್ನು ಹೇಳದೇ ಇದ್ರೆ ಅವರು ಅಷ್ಟು ಪಾಠ ಮಾಡಿಯಾದ್ರೂ ಏನು ಪ್ರಯೋಜನ?’ ಎಂದು ಯೋಚಿಸುತ್ತಲೇ ನಿಂತ ರಂಜಿನಿಗೆ ತಾನು ತಲೆಗೆ ಶ್ಯಾಂಪೋ ಹಾಕಿ, ಮೈಗೆಲ್ಲಾ ಶ್ರೀಗಂಧದ ಕಂಪಿನ ಸಾಬೂನು ಹಚ್ಚಿ ಮೈಮರೆತು ನಿಂತಿದ್ದೇನೆ ಎನ್ನುವ ಪರಿಜ್ಞಾನ ಮೂಡುವಾಗ ಹಚ್ಚಿದ ಶ್ಯಾಂಪುವಿನ ನೊರೆಯೆಲ್ಲಾ ಅವಳ ತಲೆಯಿಂದ ಸಣ್ಣಗೇ ತೇಲಿ ಅವಳ ಹಣೆ, ಕಣ್ಣು, ಮೂಗು, ಹುಬ್ಬು, ಮುಖ, ಗದ್ದ, ಕತ್ತು, ಎದೆಯ ಘಟ್ಟದ ತುಂಬಾ ಚಾರಣ ಮಾಡಿ ಶ್ರೀಗಂಧದ ಸಾಬೂನಿನ ಪರಿಮಳದಲ್ಲಿ ಕರಗಿಹೋಗಿತ್ತು.

ಅಷ್ಟೇ ಹೊತ್ತಿಗೆ ಸ್ನಾನದ ಕೋಣೆಯ ಆಚೆಗಿದ್ದ ತೋಟದಲ್ಲಿ ಅವಳಿಷ್ಟದ ಮೈನಾ ಹಕ್ಕಿ ಟು... ಟು... ಟುವ್ವಿ ಎಂದು ಕೂಗಿದ್ದೇ, ರಂಜಿನಿ ಒಮ್ಮೆ ಕಂಪಿಸಿದಂತೆ ಎಚ್ಚರವಾಗಿ ತನ್ನನ್ನೇ ಒಮ್ಮೆ ನೋಡಿಕೊಂಡಳು. ತನ್ನ ಮೈಯ ಗಂಧ, ಚೆಂದ, ಬಿಳುಪು, ಲಾವಣ್ಯ, ಲವಲವಿಕೆ ಎಲ್ಲವನ್ನೂ ನಾಚಿಕೆಯಿಂದ ನೋಡಿ ಬಕೆಟಲ್ಲಿದ್ದ ತಣ್ಣೀರು ಸುರಿದು ಇನ್ನಷ್ಟು ನಾಚಿಕೊಂಡಳು. ನೀರ ಹನಿಗಳು ಅವಳ ಮೈಯಲ್ಲಿ ಇನ್ನೇನು ಸಂಗೀತ ಕಛೇರಿ ನಡೆಸುವವರಂತೆ ಸಾಲು ಸಾಲಾಗಿ ಅಂಟಿಕೊಂಡು ಹೊಳೆಯತೊಡಗಿದವು. ಶ್ರೀಗಂಧದ ಸಾಬೂನು ಪರಿಮಳ ಅವಳ ಮೈಯ ಪರಿಮಳವನ್ನೂ ಕೂಡಿಕೊಂಡು ಇಡೀ ಸ್ನಾನದ ಕೋಣೆಯು ಒಂದು ವಿಲಕ್ಷಣ ಅನುಭೂತಿಯಿಂದ ತುಂಬಿಕೊಂಡಿತು.

‘ಇಲ್ಲ ಇವತ್ತು ಎಂತಾದ್ರೂ ಆಗ್ಲಿ, ಗ್ಯಾರಂಟಿ ಹೇಳೇ ಬಿಡ್ತೇನೆ. ಪ್ರತೀಶಾಳಿಂದ ದೂರವಿದ್ದು ಬಿಡಿ ಸರ್, ನೀವು ಅವಳತ್ರ ಸಹಜವಾಗಿ ಮಾತಾಡಿದ್ರೂ ಅವಳು ಅದನ್ನು ಲವ್ ಗಿವ್ ಅಂತೆಲ್ಲಾ ತಿಳ್ಕೊಂಡು, ಕೊನೆಗೆ ನೀವೇ ಲವ್ವ್ ಮಾಡಿದ್ದು ಅಂತೆಲ್ಲಾ ಸಮಾಜದ ಕಣ್ಣಲ್ಲಿ ನಿಮ್ಮನ್ನೇ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಿಬಿಡ್ತಾಳೆ. ಅಥವಾ ಒಳಗೊಳಗೆ ನಿಮ್ಮನ್ನು ಪ್ರೀತಿಸಿಬಿಡ್ತಾಳೆ. ಅವಳೊಂಥರಾ ವಿಚಿತ್ರ ಹುಡುಗಿ ಅವಳದ್ದು ಮುಗ್ಧತೆಯೋ, ಹುಂಬತನವೋ ಏನು ಅಂತಲೇ ಗೊತ್ತಾಗುದಿಲ್ಲ, ಅವಳು ಒಳ್ಳೆಯವಳೇ. ಆದ್ರೆ ಚೆಲ್ಲು ಮನಸ್ಸು, ನೀವು ಎಲ್ಲರನ್ನೂ ವಿದ್ಯಾರ್ಥಿನಿಯಾಗಿಯೇ ನೋಡ್ತೀರಿ. ಆದ್ರೆ ಅವಳು ಹಾಗಲ್ಲ, ನೀವು ಏನೋ ಬುದ್ಧಿ ಹೇಳೋಕೆ ಹೋದ್ರೆ, ಚೂರು ನಕ್ಕು ಮಾತಾಡಿ ಬಿಟ್ರೆ, ನಿಮಗವಳ ಬಗ್ಗೆ ಮನಸ್ಸಿದೆ ಅನ್ಕೊಂಡು ಬಿಡ್ತಾಳೆ. ಪಕ್ಕಾ ಮಾಡರ್ನ್ ಹುಡುಗಿ ಅವಳು, ಧೈರ್ಯವಂತೆ ಏನ್ ಬೇಕಾದ್ರೂ ಮಾಡ್ತಾಳೆ, ಹಾಗಾಗಿ ಅವಳ ಜೊತೆ ಮಾತಾಡಲೇಬೇಡಿ ಸರ್. ನಿಮಗದು ಕೊನೆಗೆ ಕಷ್ಟವಾಗಬಹುದು’